# ನಿಮ್ಮೊಡನೆ

**ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಕೇಸುಗಳ ಸಂಖ್ಯೆ ಕಡಿಮೆಯೇ, ಎಂದು ನಾವು ಬೆನ್ನು ತಟ್ಟಿಕೊಳ್ಳುತ್ತಿದ್ದೇವೆ ಎನ್ನುವುದು ನಿಜ. ಆದರೆ ರಾಜ್ಯ ಹೈಕೋರ್ಟಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥಕ್ಕೆ ಕಾಯುತ್ತಿವೆ ಎನ್ನುವುದು ಒಳ್ಳೆಯ ಸುದ್ದಿಯೇನಲ್ಲ. ಹೈಕೋರ್ಟಿಗಿಂತ ಹೆಚ್ಚಾಗಿ ಜಿಲ್ಲಾ ಮಟ್ಟದ ಕೋರ್ಟ್‌ಗಳಲ್ಲಿ ಹೆಚ್ಚು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಉಳಿದಿವೆ.**

## ತ್ವರಿತ ನ್ಯಾಯದಾನಕ್ಕೆ ಕ್ರಮ

ರಾಜ್ಯದಲ್ಲಿ ನ್ಯಾಯಾಂಗ ಸುಧಾರಣೆಯ ಮಾತುಗಳು ಪದೇ ಪದೇ ಕೇಳಿಬರುತ್ತಿವೆ. ತ್ವರಿತ ನ್ಯಾಯದಾನಕ್ಕಾಗಿ ನೂರೆಂಟು ಕ್ರಮಗಳನ್ನು ರೂಪಿಸಲಾಗಿದೆ. ಆದರೆ ಅಷ್ಟಾಗಿಯೂ ನ್ಯಾಯದಾನಕ್ಕೆ ಬಾಕಿ ಉಳಿದಿರುವ ಪ್ರಕರಣಗಳ ಮೊತ್ತ ನಿರೀಕ್ಷಿಸಿದಷ್ಟು ಕಡಿಮೆಯಾಗುತ್ತಿಲ್ಲ. ಲಕ್ಷಾಂತರ ಹಳೆಯ ಕೇಸುಗಳು ವರ್ಷಗಳ ಕಾಲ ನೆನೆಗುದಿಗೆ ಬಿದ್ದಿರುವಂತೆಯೇ, ಪ್ರತಿ ವರ್ಷ ಸಾವಿರಾರು ಹೊಸ ಮೊಕದ್ದಮೆಗಳು ದಾಖಲಾಗುತ್ತಿವೆ. ಅದರಲ್ಲೂ ಆಸ್ತಿ ವಿಭಜನೆಗೆ ಹಾಗೂ ಸಂಸಾರಸುಖಕ್ಕೆ ಸಂಬಂಧಿಸಿದ ಕೌಟುಂಬಿಕ ಕಲಹಗಳು ಕೋರ್ಟ್ ಮೆಟ್ಟಿಲು ಹತ್ತುವ ವಿದ್ಯಮಾನಗಳು ಇತ್ತೀಚೆಗೆ ಹೆಚ್ಚುಹೆಚ್ಚಾಗಿ ವರದಿಯಾಗುತ್ತಿವೆ. ಆಸ್ತಿ ಹಕ್ಕು, ಜೀವನಾಂಶ, ಮಕ್ಕಳ ನಿರ್ವಹಣೆ, ಬಾಡಿಗೆ ವಸೂಲಿ ಮುಂತಾದ ಕುಟುಂಬಕ್ಕೆ ಸೀಮಿತವಾದ ಸಮಸ್ಯೆಗಳೇ ಕೋರ್ಟ್‌ಗಳಲ್ಲಿ ಕಡತಗಳು ಬೆಳೆಯಲು ಮುಖ್ಯ ಕಾರಣವಾಗುತ್ತಿರುವುದು ಕಳವಳಕಾರಿ. ತಾಳ್ಮೆಯಿಂದ ಪರಸ್ಪರ ಕುಳಿತು ಒಂದೆರಡು ವಾರಗಳಲ್ಲೇ ಪರಿಹರಿಸಿಕೊಳ್ಳಬಹುದಾದ ತಗಾದೆಗಳು, ವರ್ಷಗಟ್ಟಳೆ ಕೋರ್ಟ್‌ಗಳಲ್ಲಿ ಕೊಳೆಯುತ್ತಾ, ಗಂಭೀರ ವ್ಯಾಜ್ಯಗಳಾಗಿ ಬೆಳೆಯುತ್ತಾ ಜೀವನಪೂರ್ತಿ ಜನರ ನೆಮ್ಮದಿ ಹಾಳು ಮಾಡುವಂತಹ ವಿದ್ಯಮಾನಗಳಿಗೆ, ತ್ವರಿತ ನ್ಯಾಯದಾನದ ಕ್ರಮಗಳಿಂದ ಮಾತ್ರ ಪರಿಹಾರ ಸಾಧ್ಯ ಎನ್ನುವುದು ನಿಸ್ಸಂಶಯ.

'ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಕೇಸುಗಳ ಸಂಖ್ಯೆ ಕಡಿಮೆಯೇ' ಎಂದು ನಾವು ಬೆನ್ನು ತಟ್ಟಿಕೊಳ್ಳುತ್ತಿದ್ದೇವೆ ಎನ್ನುವುದು ನಿಜ. ಆದರೆ ರಾಜ್ಯ ಹೈಕೋರ್ಟಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥಕ್ಕೆ ಕಾಯುತ್ತಿವೆ ಎನ್ನುವುದು ಒಳ್ಳೆಯ ಸುದ್ದಿಯೇನಲ್ಲ. ಹೈಕೋರ್ಟಿಗಿಂತ ಹೆಚ್ಚಾಗಿ ಜಿಲ್ಲಾ ಮಟ್ಟದ ಕೋರ್ಟ್‌ಗಳಲ್ಲಿ ಹೆಚ್ಚು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಉಳಿದಿವೆ ಎನ್ನುವುದೂ ಗಮನಾರ್ಹ. ಇತ್ತೀಚೆಗೆ ಮೈಸೂರಿನಲ್ಲಿ ನಡೆದ ವಿಭಾಗ ಮಟ್ಟದ ನ್ಯಾಯಾಧೀಶರ ಸಭೆಯಲ್ಲಿ ಬಹಿರಂಗವಾದಂತೆ ಮೈಸೂರು ಜಿಲ್ಲೆಯೊಂದರಲ್ಲೇ 60 ಸಾವಿರಕ್ಕೂ ಹೆಚ್ಚು ಮೊಕದ್ದಮೆಗಳು ಇತ್ಯರ್ಥಕ್ಕೆ ಬಾಕಿ ಉಳಿದಿವೆ. ಒಂದು ಜಿಲ್ಲೆಯಲ್ಲಿ ಇಷ್ಟಾದರೆ ರಾಜ್ಯದ ಎಲ್ಲ ಜಿಲ್ಲೆಗಳ ನೂರಾರು ಕೋರ್ಟುಗಳಲ್ಲಿ ಎಷ್ಟು ಲಕ್ಷ ಪ್ರಕರಣಗಳು ಬಾಕಿ ಇರಬಹುದು ಎನ್ನುವುದನ್ನು ಊಹಿಸಬಹುದು.

ಅಧೀನ ಕೋರ್ಟ್‌ಗಳಲ್ಲಿ ಹೀಗೆ ಬಾಕಿ ಉಳಿದಿರುವ ಲಕ್ಷಾಂತರ ಪ್ರಕರಣಗಳಲ್ಲಿ ತ್ವರಿತ ನ್ಯಾಯದಾನಕ್ಕೆ ಇದೀಗ ಹೈಕೋರ್ಟ್ ಹೊಸ ಉಪಕ್ರಮವೊಂದನ್ನು ಜಾರಿಗೆ ತಂದಿದೆ. ನಿರ್ದಿಷ್ಟ ಸ್ವರೂಪದ ಪ್ರಕರಣಗಳನ್ನು ಇಂತಿಷ್ಟು ತಿಂಗಳಲ್ಲೇ ಮುಗಿಸಬೇಕು ಎಂದು ಕಾಲಮಿತಿಯನ್ನು ನಿರ್ಧರಿಸಿರುವ ರಾಜ್ಯ ಹೈಕೋರ್ಟಿನ ಈ ಕ್ರಮ ಸ್ವಾಗತಾರ್ಹ. ಹಾಗೆ ನೋಡಿದರೆ, 'ಕೇಸ್ ಫ್ಲೋ ಮ್ಯಾನೇಜ್‌ಮೆಂಟ್' ಎಂಬ ಹೆಸರಿನ ಈ ಯೋಜನೆ 2005ರಲ್ಲೇ ಪ್ರಕಟವಾಗಿದೆ. ಆದರೆ ಯೋಜನೆ ಕಾಗದದಲ್ಲೇ ಉಳಿದಿತ್ತು! ತಡವಾಗಿಯಾದರೂ ಹೈಕೋರ್ಟ್ ಈ ಯೋಜನೆಯ ಜಾರಿಗೆ ಗಮನ ಹರಿಸಿದ್ದು, ಇನ್ನಾದರೂ ಕಕ್ಷಿದಾರರ ಸಂಕಷ್ಟ ಕೊನೆಗೊಳ್ಳುವ ನಿರೀಕ್ಷೆ ಮೂಡಿಸಿದೆ. ಇನ್ನು ಮುಂದೆ ಆಸ್ತಿ ಹಕ್ಕು, ಜೀವನಾಂಶ, ಮಕ್ಕಳ ನಿರ್ವಹಣೆ, ಬಾಡಿಗೆ ವಸೂಲಿ ಮುಂತಾದ ಪ್ರಕರಣಗಳ ವಿಚಾರಣೆಯನ್ನು 9 ತಿಂಗಳಲ್ಲಿ ಮುಗಿಸಲೇಬೇಕು ಎಂದು ಹೈಕೋರ್ಟ್ ಕಡ್ಡಾಯ ಮಾಡಿದೆ. ಹಾಗೆಯೇ ವಿಚ್ಛೇದನ ಪ್ರಕರಣಗಳ ವಿಚಾರಣೆಯನ್ನು 12 ತಿಂಗಳ ಒಳಗೆ ನಿರ್ಧರಿಸಬೇಕು ಎಂದು ಸೂಚಿಸಿದೆ. ಆಸ್ತಿ ವಿಭಜನೆ, ಪರಿಹಾರ ಕೋರಿಕೆ, ಕಾಪಿ ರೈಟ್, ಪೇಟೆಂಟ್ ಮುಂತಾದ ವ್ಯಾಜ್ಯಗಳ ಕುರಿತು ತೀರ್ಪನ್ನು ಗರಿಷ್ಟ 24 ತಿಂಗಳ ಒಳಗೆ ನೀಡಬೇಕೆಂದೂ ಹೊಸ ಯೋಜನೆಯಲ್ಲಿ ಸೂಚಿಸಲಾಗಿದೆ. ಈ ಕಾಲಮಿತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಹೈಕೋರ್ಟ್ ಸೂಕ್ತ ಆಡಳಿತಾತ್ಮಕ ಉಪಕ್ರಮಗಳನ್ನೂ ಕೈಗೊಳ್ಳಬೇಕು.

ಸಾಮಾನ್ಯವಾಗಿ ಕೋರ್ಟ್‌ಗಳಲ್ಲಿ ಬೆಳಿಗ್ಗೆಯ 2–3 ಗಂಟೆಗಳ ಕಾಲ ಆಡಳಿತಾತ್ಮಕ ಕ್ರಮಗಳಿಗೇ ಸಮಯ ವ್ಯಯವಾಗುತ್ತಿದೆ. ವಕೀಲರು ಅರ್ಜಿಗೆ ವಕಾಲತ್ತು ಹಾಕಲು ಗಂಟೆಗಳ ಕಾಲ ಕೋರ್ಟಿನಲ್ಲಿ ಕಾಯುವುದು ಸಾಮಾನ್ಯ ದೃಶ್ಯ. ಹಾಗೆಯೇ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡುವುದು, ಯಾವ ಪ್ರಕರಣಗಳನ್ನು ಲೋಕ ಅದಾಲತ್ ಅಥವಾ ರಾಜಿ ಕೇಂದ್ರಗಳಿಗೆ ಕಳುಹಿಸಬೇಕು ಎನ್ನುವುದನ್ನು ನಿರ್ಧರಿಸಲೇ ಬೆಳಿಗ್ಗೆ ಕೋರ್ಟುಗಳ ಹೆಚ್ಚಿನ ಸಮಯ ವ್ಯಯವಾಗುತ್ತದೆ. ಇದನ್ನು ತಪ್ಪಿಸಿ, ಇಂತಹ ಆಡಳಿತಾತ್ಮಕ ನಿರ್ಧಾರಗಳನ್ನು ತೆರೆದ ನ್ಯಾಯಾಲಯದ ಬದಲು ಕಚೇರಿಗಳಲ್ಲಿ ತೀರ್ಮಾನ ಮಾಡಬೇಕೆಂದು ಹೈಕೋರ್ಟ್ ಸೂಚಿಸಿರುವುದು ಗಮನಾರ್ಹ ಕ್ರಮವೇ ಸರಿ. ಇದರಿಂದ ನ್ಯಾಯಾಧೀಶರಿಗೆ ವ್ಯಾಜ್ಯಗಳ ವಿಚಾರಣೆಗೆ ಹೆಚ್ಚಿನ ಸಮಯ ಸಿಗಲಿದೆ. 'ನ್ಯಾಯದಾನ ವಿಳಂಬವಾದರೆ ನ್ಯಾಯ ನಿರಾಕರಣೆ ಆದಂತೆ' ಎಂಬ ಹೇಳಿಕೆ ಎಲ್ಲರಿಗೂ ಗೊತ್ತಿದ್ದದ್ದೇ. ಎಷ್ಟೋ ಆಸ್ತಿ ವಿವಾದಗಳು 2–3 ತಲೆಮಾರುಗಳವರೆಗೂ ಮುಂದುವರಿದು, ಇಡೀ ಕುಟುಂಬದ ನೆಮ್ಮದಿಯನ್ನು ನಾಶ ಮಾಡಿರುವ ಪ್ರಕರಣಗಳು ಬೇಕಾದಷ್ಟಿವೆ. ತ್ವರಿತ ನ್ಯಾಯದಾನದ ಮೂಲಕ ಕಕ್ಷಿದಾರರ ನೆಮ್ಮದಿಯನ್ನು ಮರಳಿ ಒದಗಿಸಲು ಸಾಧ್ಯವಾದರೆ ಅದಕ್ಕಿಂತ ದೊಡ್ಡ ಸುಧಾರಣೆ ಇನ್ನೊಂದಿಲ್ಲ.

■ ಬಿ.ಎಂ. ಹನೀಫ್

